ದಿ: 31.10.2025 ರಂದು ವಾದಿಯನ್ನು ಪುನ: ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

<u>**ಮುಂದುವರೆದ ಪಾಟೀ ಸವಾಲು**</u>: ಪ್ರತಿವಾದಿಗಳ ಪರ ಶ್ರೀಯುತ ಕೆ.ಆರ್.ಎ ವಕೀಲರಿಂದ.

5. ನಾನು ನನ್ನ ಈ ಹಿಂದಿನ ಪಾಟೀ ಸವಾಲಿನಲ್ಲಿ ಹೇಳಿದಂತೆ ನನ್ನ ತಾತ ರವರು ನಂಜಪ್ಪರವರಿಗೆ ಮಾರಾಟ ಮಾಡಿದ್ದರು ಎಂದು ಹೇಳುವ ಆಸ್ತಿಯ ಚಕ್ಕುಬಂದಿಯಲ್ಲಿ ನಂಜಪ್ಪ ಮತ್ತು ಅವರ ನಂತರ ಅವರ ಮಕ್ಕಳು ಸ್ವಾಧೀನ ಹೊಂದಿ ಅನುಭವಿಸಿಕೊಂಡು ಬರುತ್ತಿದ್ದಾರೆ ಎಂದರೆ ಸರಿಯಲ್ಲ. ಆ ರೀತಿ ನಿಮ್ಮ ತಾತನವರು ನಂಜಪ್ಪರವರಿಗೆ ಮಾರಾಟ ಮಾಡಿದ ಆಸ್ತಿಯ ಚಕ್ಕುಬಂದಿಯಲ್ಲಿ ಯಾರು ವಾಸವಿದ್ದಾರೆ ಎಂದು ಹೇಳಲು ಬರುತ್ತದೆಯಾ ಎನ್ನುವ ಪ್ರಶ್ನೆಗೆ ಸಾಕ್ಷಿಯು ಯಾರು ವಾಸವಿರುವುದಿಲ್ಲ ಎಂದು ನುಡಿಯುತ್ತಾರೆ. ಆ ರೀತಿ ನನ್ನ ತಾತ ನಂಜಪ್ಪರವರಿಗೆ ಮಾರಾಟ ಮಾಡಿದ ಆಸ್ತಿಯ ಚಕ್ಕುಬಂದಿಯಲ್ಲಿ ರಾಮಸ್ವಾಮಿ ಮತ್ತು ಅವರ ಕುಟುಂಬದವರು ಮನೆ ಕಟ್ಟಿಕೊಂಡು ವಾಸ ಮಾಡಿಕೊಂಡು ಬರುತ್ತಿದ್ದಾರೆ ಎಂದರೆ ಸರಿಯಲ್ಲ. ದಾವಾ ಆಸ್ತಿಯ ಪಶ್ಚಿಮ ದಿಕ್ಕಿನಲ್ಲಿನ ನಂಜಪ್ಪರವರ ವಠಾರ ಸದರಿ ಪ್ರಸ್ತುತ ಪ್ರತಿವಾದಿಗಳು ಮನೆ ಕಟ್ಟಿಕೊಂಡು ವಾಸವಿರುವ ಆಸ್ತಿ ಆಗಿರುತ್ತದೆ ಎಂದರೆ ಸಾಕ್ಷಿಯು ಸದರಿ ನಂಜಪ್ಪರವರು ಮೃತಪಟ್ಟ ನಂತರ ಯಾರು ವಾಸವಾಗಿರುವುದಿಲ್ಲ ಎಂದು ನುಡಿಯುತ್ತಾರೆ. ನಾನು ನನ್ನ ತಾತ ಖರೀದಿಸಿದ ಆಸ್ತಿಯ ವಿಸ್ತೀರ್ಣಕ್ಕಿಂತ ಹೆಚ್ಚಗಿನ ವಿಸ್ತೀರ್ಣದ ಆಸ್ತಿಯನ್ನು ಕಬಳಿಸುವ ಸಲುವಾಗಿ ಪ್ರಸ್ತುತ ಸುಳ್ಳು ದಾವೆಯನ್ನು ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ. ನಾನು ವಾದ ಪತ್ರದಲ್ಲಿ ಕಾಣಿಸಿರುವಂತೆ ರಾಮಸ್ವಾಮಿ ಮತ್ತು ಇತರ ಪ್ರತಿವಾದಿಗಳು ಯಾವತ್ತು ನಮಗೆ ತೊಂದರೆ ನೀಡಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಪ್ರತಿವಾದಿಗಳು ತೊಂದರೆ ನೀಡಿದ ಮೇರೆಗೆ ಪೊ.ಠಾಣೆಗೆ ದೂರು ನೀಡಿದ್ದೇನೆ ಎಂದು ಹೇಳುವ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ಈ ಹಂತದಲ್ಲಿ ಪ್ರತಿವಾದಿ ಪರ ವಕೀಲರು ಸಾಕ್ಷಿಗೆ ವಾದಿ ಪರವಾಗಿ ನಿಶಾನೆ ಕರಿಸಲಾದ ದಾಖಲೆಗಳನ್ನು ತೋರಿಸಿ ಸದರಿ ಪೊಲೀಸ್ ಪಿರ್ಯಾದ್ದಿನ ದಾಖಲೆಯನ್ನು ನೋಡಿ ಗುರುತಿಸುವಂತೆ ಸೂಚಿಸಿದ ಮೇರೆಗೆ ಸಾಕ್ಷಿಯು ದಾಖಲೆಗಳನ್ನು ನೋಡಿ ನಿಪಿ.6 ಎಂದು ತೋರಿಸಿರುತ್ತಾರೆ. ನಾನು ಪೊಲೀಸರೊಂದಿಗೆ ಸೇರಿಕೊಂಡು ನಿಪಿ.6 ನ್ನು ಸೃಷ್ಟಿಸಿರುತ್ತೇನೆ ಎಂದರೆ ಸರಿಯಲ್ಲ. ಪ್ರತಿವಾದಿಗಳು ನನಗೆ ಯಾವತ್ತು ತೊಂದರೆ ನೀಡದೇ ಇದ್ದರೂ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

6. ನೀವು ಈ ಹಿಂದಿನ ಪಾಟೀ ಸವಾಲಿನ ದಾವಾ ಆಸ್ತಿಯ ಪೂರ್ವಕ್ಕೆ ಇದೆ ಎಂದು ಹೇಳುವ ಓಣಿಯ ಕುರಿತಾದ ದಾಖಲೆಗಳನ್ನು ಹಾಜರುಪಡಿಸುತ್ತೇನೆ ಎಂದು ಹೇಳಿದ ಓಣಿಯ ದಾಖಲೆಗಳನ್ನು ಈ ದಿನ ನ್ಯಾಯಾಲಯದಲ್ಲಿ ಹಾಜರುಪಡಿಸಿರುವುದಿಲ್ಲ ಎಂದರೆ ಸಾಕ್ಷಿಯು ದಾಖಲೆಗಳು ಇರುವುದಿಲ್ಲ ಮತ್ತು ಆ ರೀತಿ ನಮಗೆ ಕ್ರಯ ಆಗಿರುತ್ತದೆ ಎಂದು ನುಡಿಯುತ್ತಾರೆ. ಸಾಕ್ಷಿಯು ಸ್ವತ: ಮುಂದುವರೆದು ನಾವು ಖರೀದಿಸಿದ ಪಶ್ಚಿಮ ದಿಕ್ಕಿನಿಂದ ದಾವಾ ಆಸ್ತಿಯನ್ನು ಅಳತೆ ಮಾಡಲು ನಮಗೆ ಯಾವುದೇ ಅಭ್ಯಂತರ ಇರುವುದಿಲ್ಲ ಎಂದು ನುಡಿಯುತ್ತಾರೆ. ದಾವಾ ಆಸ್ತಿಯ ಪೂರ್ವ ದಿಕ್ಕಿನಲ್ಲಿ ಇತ್ತು ಎಂದು ಹೇಳುವ ಓಣಿಯು ಪ್ರಸ್ತುತ ಸಾರ್ವಜನಿಕ ರಸ್ತೆ ಆಗಿರುತ್ತದೆ ಎಂದರೆ ಸರಿಯಲ್ಲ. ನಿಪಿ.1 ರಲ್ಲಿ ನನ್ನ ತಾತ ಖರೀದಿಸಿದ ದಾವಾ ಆಸ್ತಿಯ ಪೂರ್ವಕ್ಕೆ ಸರ್ಕಾರಿ ದಾರಿ ಎಂದು ನಮೂದಿಸಲಾಗಿರುತ್ತದೆ ಎಂದರೆ ಸರಿಯಲ್ಲ. ನಿಪಿ.1 ರಲ್ಲಿ ನಿಮ್ಮ ತಾತ ಖರೀದಿಸಿದ ದಾವಾ ಆಸ್ತಿಯ ಪೂರ್ವಕ್ಕೆ ಸರ್ಕಾರಿ ದಾರಿ ಎಂದು ನಮೂದಿಸಿದ್ದರೂ ಸರಿ ಇರುವುದಿಲ್ಲ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ಸರ್ಕಾರಿ ದಾರಿಯ ಆನಂತರದಿಂದ ಪೂಪ-75 ಅಡಿಗಳ ಆಸ್ತಿಯನ್ನು ಮಾತ್ರ ನಮಗೆ ಮಾರಾಟ ಮಾಡಲಾಗಿರುತ್ತದೆ ಎಂದರೆ ಸರಿಯಲ್ಲ.

7. ಈಗ ನನಗೆ ತೋರಿಸಿದ ಛಾಯಾಚಿತ್ರದಲ್ಲಿ ಕಾಣುತ್ತಿರುವ ಬಿಳಿ ಬಣ್ಣದ ಕಟ್ಟಡವು ನನ್ನ ಅಣ್ಣನ ಮನೆ ಎಂದರೆ ಸರಿ. ಸದರಿ ಛಾಯಾಚಿತ್ರವನ್ನು ಸಾಕ್ಷಿ ನೋಡಿ ಗುರುತಿಸಿದ ಮೇರೆಗೆ ನಿಡಿ.೧ ಎಂದು ಗುರುತಿಸಲಾಯಿತು. ನಿ.ಡಿ.1ರ ಛಾಯಾಚಿತ್ರದಲ್ಲಿನ ನಿಮ್ಮ ಅಣ್ಣನ ಮನೆಯ ಪಕ್ಕದಲ್ಲಿರುವ ಮನೆ ರಾಮಸ್ವಾಮಿರವರ ಮನೆ ಆಗಿರುತ್ತದೆ ಎಂದರೆ ಸರಿ. ಈಗ ನನಗೆ ತೋರಿಸಿದ ಛಾಯಾಚಿತ್ರದಲ್ಲಿ ಕಾಣುತ್ತಿರುವ ರಸ್ತೆಯು ನಾನು ಈ ಹಿಂದೆ ಹೇಳಿರುವ ಓಣಿ ಎಂದರೆ ಸರಿಯಲ್ಲ. ಈ ಹಂತದಲ್ಲಿ ಪ್ರತಿವಾದಿ ಪರ ವಕೀಲರು ಸಾಕ್ಷಿಗೆ ನಿ.ಡಿ.1 ಛಾಯಾಚಿತ್ರವನ್ನು ತೋರಿಸಿ ಓಣಿಯನ್ನು ನೋಡಿ ಗುರುತಿಸುವಂತೆ ಸೂಚಿಸಿದ ಮೇರೆಗೆ ಸಾಕ್ಷಿಯು ನಿ.ಡಿ.1 ರಲ್ಲಿ ಕಾರು ನಿಂತಿರುವ ಜಾಗ ಓಣಿ ಎಂದು ನುಡಿಯುತ್ತಾರೆ. ಸದರಿ ನಿ.ಡಿ.1 ಛಾಯಾಚಿತ್ರದಲ್ಲಿ ಕಾರು ನಿಂತಿರುವ ಜಾಗವು ಖಾನೇಷುಮಾರಿ ಸಂಖ್ಯೆ 75 ಆಸ್ತಿ ಆಗಿರುತ್ತದೆ ಎಂದರೆ ಸರಿಯಲ್ಲ. ನಿ.ಡಿ.1ರಲ್ಲಿರುವ ರಾಮಸ್ವಾಮಿರವರ ಮನೆಯು ಖಾನೇಷುಮಾರಿ ಸಂಖ್ಯೆ 75 ರಲ್ಲಿರುವ ಮನೆ ಆಗಿರುತ್ತದೆ ಎಂದರೆ ಸಾಕ್ಷಿಯು ಒತ್ತುವರಿ ಮಾಡಿಕೊಂಡು ಕಟ್ಟಿರುತ್ತಾರೆ ಎಂದು ನುಡಿಯುತ್ತಾರೆ. ಸದರಿ ಖಾನೇಷುಮಾರಿ ಸಂಖ್ಯೆ 75 ಆಸ್ತಿಯು ನಿ.ಡಿ.1 ಛಾಯಾಚಿತ್ರದಲ್ಲಿನ ಚರಂಡಿಯಿಂದ ಪಶ್ಚಿಮದ ಕಡೆಗೆ ಪ್ರಾರಂಭವಾಗುತ್ತದೆ ಎಂದರೆ ಸರಿಯಲ್ಲ.

8. ದಾವಾ ಆಸ್ತಿಯು ನಿಮಗೆ ಯಾವ ರೀತಿ ಬಂದಿರುತ್ತದೆ ಎಂದು ಹೇಳಲು ಬರುತ್ತದೆಯಾ ಎನ್ನುವ ಪ್ರಶ್ನೆಗೆ ಸಾಕ್ಷಿಯು ನನ್ನ ತಾತನಿಂದ ನನ್ನ ತಂದೆಗೆ ಬಂದಿದ್ದು ಆ ನಂತರ ನನ್ನ ತಾಯಿ ನನಗೆ ಮನೆಕಟ್ಟಿಕೊಳ್ಳುವ ಸಲುವಾಗಿ ನೀಡಿರುತ್ತಾರೆ ಎಂದು ನುಡಿಯುತ್ತಾರೆ.

**ಮುಂದುವರೆದ ಪಾಟೀ ಸವಾಲನ್ನು ಮಧ್ಯಾಹ್ನದ ಅವಧಿಗೆ ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದ ಮೇಲೆ ಗಣಕೀಕರಿಸಿದೆ)

ಓ.ಹೇ.ಕೇ.ಸ.ಇದೆ.

ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.
ಹೊಸಕೋಟೆ.